**ಒ.ಎಸ್ ನಂ. 60/2025 , ಪಿ. ಡಬ್ಲ್ಯೂ-1**

**ಸಾಕ್ಷಿಯನ್ನು ದಿನಾಂಕಃ25-07-2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಶ್ರೀಃ ಡಿ.ಎನ್.ಎಸ್ ಎರಡನೇ ಪ್ರತಿವಾದಿ ಪರ ವಕೀಲರಿಂದಃ**

3. ಮಹಾಬಲ ಶೆಟ್ಟಿ ಅವರ ಮಗಳು ಧನಲಕ್ಷ್ಮಿ ಮತ್ತು ಮಹಾಬಲ ಶೆಟ್ಟಿಯವರ ಮಗ ಪುರುಷೋತ್ತಮ ಶೆಟ್ಟಿ ಹಾಲಿ ಎಲ್ಲಿ ನೆಲೆಸಿರುತ್ತಾರೆ ಎಂದು ನಿಮಗೆ ತಿಳಿದಿರುತ್ತದೆಯೋ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಈ ದಾವೆಯನ್ನು ದಾಖಲಿಸಲು ಧನಲಕ್ಷ್ಮಿ ಯವರ ವಿಳಾಸವು ಒಂದನೇ ಪ್ರತಿವಾದಿಯವರ ಕಚೇರಿಯಿಂದ ಸಿಕ್ಕಿರುತ್ತದೆ. ಧನಲಕ್ಷ್ಮಿಯವರ ವಿಳಾಸವು ಯಾವುದಾಗಿರುತ್ತದೆ ಎಂದು ನನಗೆ ನೆನಪಾಗುತ್ತಿಲ್ಲ. ಮಹಾಬಲ ಶೆಟ್ಟಿಯವರು ಯಾವಾಗ ಮರಣ ಹೊಂದಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಇವತ್ತಿನಿಂದ ಆಚೆ ವರ್ಷದ ಡಿಸೆಂಬರ ತಿಂಗಳಲ್ಲಿ ನಾನು ವಾಸ ಮಾಡಿಕೊಂಡಿರುವ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಮಹಾಬಲ ಶೆಟ್ಟಿಯವರು ಧನಲಕ್ಷ್ಮಿ ಮತ್ತು ಪುರುಷೋತ್ತಮ ಶೆಟ್ಟಿಯವರ ತಂದೆ ಆಗಿರುತ್ತಾರೆ ಎಂದರೆ ನನಗೆ ಹೇಳಲು ಸಾದ್ಯವಿಲ್ಲ. ಮುನ್ಸಿಪಾಲ್ಟಿಯವರು ತುಂಬಾ ಹೇಳುತ್ತಾರೆ.

4. ನೀವುಮಹಾಬಲ ಶೆಟ್ಟಿಯವರ ವಿರುದ್ದ ಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ದೂರು ದಾಖಲಿಸಿರುತ್ತಿರೋ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನನಗೆ ಅಕ್ಷರಗಳು ಕಾಣುವುದಿಲ್ಲ , ಆದ್ದರಿಂದ ಓದಲು ಸಾದ್ಯವಿಲ್ಲ , ನನಗೆ ಓದಿ ಹೇಳಿದರೆ ತಿಳಿಯುತ್ತದೆ. ನೀವು 2009 ನೇ ಸಾಲಿನಲ್ಲಿ ನಿಮಗೆ ಖರ್ಚಿಗೆ ಹಣ ನೀಡಬೇಕು ಎಂದು ಹೇಳಿ ಮಹಾಬಲ ಶೆಟ್ಟಿಯವರ ವಿರುದ್ದ ಒಂದು ಪ್ರಕರಣವನ್ನು ದಾಖಲಿಸಿದ್ದೀರಿ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನೀವು ಸದರಿ ಪ್ರಕರಣದಲ್ಲಿ ನೀವು ಮತ್ತು ಮಹಾಬಲ ಶೆಟ್ಟಿ ಯವರು 1968 ನೇ ಸಾಲಿನಿಂದ ಬೇರೆ ಬೇರೆ ವಾಸ ಮಾಡಿಕೊಂಡಿರುತ್ತೀರಿ ಎಂದು ತಿಳಿಸಿರುತ್ತೀರಿ ಎಂದರೆ ನಾನು ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಜಾಗಕ್ಕೆ ಸಂಬಂಧಿಸಿ ಮಹಾಬಲ ಶೆಟ್ಟಿ ಯವರ ವಿರುದ್ದ ಈ ನ್ಯಾಯಾಲಯದಲ್ಲಿ ದಾವೆ ಏನಾದರೂ ಹೂಡಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನೀವು ಇದೇ ನ್ಯಾಯಾಲಯದಲ್ಲಿ FDP 1/2019 ರಲ್ಲಿ ನಿಮಗೂ ಕೂಡ ಪಾಲು ಇದೆ ಎಂದು ನೀವು ಹೇಳಿರುತ್ತೀರಿ ಎಂದರೆ ನನಗೆ ನೆನಪಿರುವುದಿಲ್ಲ.

5. ನನ್ನ ಪಡಿತರ ಚೀಟಿ ನನ್ನ ಮನೆಯಲ್ಲಿರುತ್ತದೆ. ನಿಮ್ಮ ಪಡಿತರ ಚೀಟಿಯಲ್ಲಿ ಯಾರ ಯಾರ ಹೆಸರು ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಮತ್ತು ನನ್ನ ನಾಲ್ಕು ಮಕ್ಕಳ ಹೆಸರು ಇರುತ್ತದೆ. ಸಾಕ್ಷಿಯು ಮುಂದುವರೆದು ಅವರು ನನ್ನಲ್ಲಿ ಅವರು ಹುಟ್ಟಿದ ಮನೆಯಲ್ಲಿಯೇ ಅವರ ಹೆಸರು ಇರಲಿ ಎಂದು ತೀರ್ಮಾನಿಸಿ ನನ್ನ ಮತ್ತು ನನ್ನ ನಾಲ್ಕು ಮಕ್ಕಳ ಹೆಸರು ಮಾತ್ರ ಪಡಿತರ ಚೀಟಿಯಲ್ಲಿ ನಮೂದಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಪಡಿತರ ಚೀಟಿಯಲ್ಲಿ ಮಹಾಬಲ ಶೆಟ್ಟಿಯವರ ಹೆಸರು ಇರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

6. ಮಹಾಬಲ ಶೆಟ್ಟಿಯವರು ಮರಣ ಹೊಂದುವ ಕಾಲಕ್ಕೆ ಅವರ ಬಳಿ ತುಂಬಾ ಹಣ ಇತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ಇತ್ತು ಎಂದು ನುಡಿಯುತ್ತಾರೆ. ಮಹಾಬಲ ಶೆಟ್ಟಿ ಯವರ ಸಹಿ ಯಾವ ರೀತಿ ಇರುತ್ತದೆ ಎಂದು ನೋಡಿದರೆ ಹೇಳಲು ಸಾದ್ಯವಾಗುತ್ತದೆ. ನಾನು ಮಹಾಬಲ ಶೆಟ್ಟಿ ಯವರ ಚಾಯಾ ಚಿತ್ರ ನೋಡಿದರೆ ಗುರುತಿಸಬಹುದು. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದರಲ್ಲಿರುವ ಫೋಟೋ ಯಾರದ್ದಾಗಿರುತ್ತದೆ ಎಂದು ಪ್ರಶ್ನಿಸಿದ್ದಕ್ಕೆ ಅದು ಮಹಾಬಲ ಶೆಟ್ಟಿ ಯವರ ಫೋಟೊ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಯನ್ನು ನಿ.ಡಿ. 1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಿ ಅದರಲ್ಲಿರುವ ಫೊಟೋ ಯಾರದ್ದಾಗಿರುತ್ತದೆ ಎಂದು ಪ್ರಶ್ನಿಸಿದ್ದಕ್ಕೆ ಅದು ಮಹಾಬಲ ಶೆಟ್ಟಿ ಯವರ ಫೋಟೊ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಯನ್ನು ನಿ.ಡಿ. 2 ಎಂದು ಗುರುತಿಸಲಾಯಿತು. ಮಹಾಬಲ ಶೆಟ್ಟಿಯವರ ಪಡಿತರ ಚೀಟಿಯಲ್ಲಿ ಅವರ ಸಹೋದರಿ ಸುಂದರಿಯವರೊಂದಿಗೆ ಇರುವಂತಹ ಚೀಟಿ ಆಗಿರುತ್ತದೆ. ಮಹಾಬಲ ಶೆಟ್ಟಿ ಯವರು ಅವರ ಸಹೋದರಿ ಸುಂದರಿಯೊಂದಿಗೆ ಮಾಡಿಸಿದ ಪಡಿತರ ಚೀಟಿಯನ್ನು ಹಾಜರುಪಡಿಸಬಹುದೇ ಎಂಬ ಪ್ರಶ್ನೆಗೆ ಸಾಕ್ಷಿಯು ಅವರ ಸಹೋದರಿ ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ಬರೆದಂತಹ ಅಕ್ಷರಗಳು ನಿಮಗೆ ತಿಳಿಯುತ್ತದೆಯೋ ಎಂಬ ಪ್ರಶ್ನೆಗೆ ಸಾಕ್ಷಿಯು ಅದನ್ನು ನೋಡಿ ಮಹಾಬಲ ಶೆಟ್ಟಿ ಎಂದು ಓದುತ್ತಾರೆ. ಆದ್ದರಿಂದ ಸದರಿ ದಾಖಲಾತಿಯನ್ನು ನಿ.ಡಿ. 3 ಎಂದು ಗುರುತಿಸಲಾಯಿತು. ನಿ.ಡಿ. 3 ಮಹಾಬಲ ಶೆಟ್ಟಿಯವರ ಪಡಿತರ ಚೀಟಿ ಆಗಿರುತ್ತದೆಯೋ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಧನಲಕ್ಷ್ಮಿ ಯವರ ವಿಳಾಸವನ್ನು ಹೊರತುಪಡಿಸಿ ನೀವು ಅವರ ಬಗ್ಗೆ ತಿಳಿದುಕೊಂಡಿರುತ್ತಿರೋ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಧನಲಕ್ಷ್ಮಿ ಯವರ 10 ನೇ ತರಗತಿಯ ಮಾರ್ಸ್ ಕಾರ್ಡ್ ನಲ್ಲಿ ಅವರ ತಂದೆಯ ಹೆಸರು

ಮಹಾಬಲ ಶೆಟ್ಟಿ ಮತ್ತು ತಾಯಿಯ ಹೆಸರು ಜಾನಕಿ ಎಂದು ನಮೂದಿಸಲಾಗಿರುತ್ತದೆ ಎಂದರೆ ಸಾಕ್ಷಿಯು ಬೇರೆಯವರು ಹೇಗೆ ಬರೆದಿರುತ್ತಾರೆ ಎಂದು ನಾನು ಹೇಗೆ ಹೇಳಲಿ ಎಂದು ನುಡಿಯುತ್ತಾರೆ. ಧನಲಕ್ಷ್ಮಿಯವರ ಪಾನ್ ಕಾರ್ಡ್ ನಲ್ಲಿ ಅವರ ತಂದೆಯ ಹೆಸರು ಮಹಾಬಲ ಶೆಟ್ಟಿ ಎಂದು ನಮೂದಿಸಲಾಗಿರುತ್ತದೆ ಎಂದರೆ ನನಗೆ ತಿಳಿದಿರುವುದಿಲ್ಲ.

7. ನನಗೆ ಪುರುಷೋತ್ತಮರವರ ಪರಿಚಯ ಇರುವುದಿಲ್ಲ, ಆದರೆ ಅವರನ್ನು ಮಾರ್ಗಮದ್ಯದಲ್ಲಿ ನೋಡಿರುತ್ತೇನೆ. ಪುರುಷೋತ್ತಮರವರ ಚುನಾವಣಾ ಗುರುತಿನ ಚೀಟಿಯಲ್ಲಿ, ಪಾನ್ ಕಾರ್ಡ್ ನಲ್ಲಿ ಅವರ ತಂದೆಯ ಹೆಸರು ಮಹಾಬಲ ಶೆಟ್ಟಿ ಎಂದು ನಮೂದಿಸಲಾಗಿರುತ್ತದೆ ಎಂದರೆ ತಿಳಿದಿರುವುದಿಲ್ಲ. ಸಾಕ್ಷಿ ಒಂದು ಫೋಟೋವನ್ನು ನೋಡಿ ಅದರಲ್ಲಿ ಮಹಾಬಲ ಶೆಟ್ಟಿಯವರು ಇರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಫೋಟೋವನ್ನು ನಿ.ಡಿ. 4 ಎಂದು ಗುರುತಿಸಲಾಯಿತು. ನಿ.ಡಿ. 4 ರಲ್ಲಿ ಕಂಡುಬರುವ ಇತರರು ಯಾರಾಗಿರುತ್ತಾರೆ ಎಂದು ನನಗೆ ಹೇಳಲು ಸಾದ್ಯವಿಲ್ಲ.

8. ಮಹಾಬಲ ಶೆಟ್ಟಿಯವರ ಮರಾಣಾನಂತರದ ಕ್ರಿಯೆಗಳನ್ನು ಗೌರಿ ದೇವಸ್ಥಾನದಲ್ಲಿ ನಾವೇ ಮಾಡಿರುತ್ತೇವೆ. ಸದರಿ ದಿನ ಆದಂತಹ ಖರ್ಚು ವೆಚ್ಚಗಳ ಬಗ್ಗೆ ನಿಮ್ಮ ಬಳಿ ದಾಖಲಾತಿಗಳು ಇರುತ್ತದೆಯೋ ಎಂಬ ಪ್ರಶ್ನಗೆ ಸಾಕ್ಷಿಯು ನನ್ನ ಮಕ್ಕಳು ಖರ್ಚು ಮಾಡಿರುತ್ತಾರೆ, ಅವರ ಬಳಿ ಇರುತ್ತದೆಯೋ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ಉತ್ತರ ಕ್ರಿಯೆಯ ಬಗ್ಗೆ ಆಮಂತ್ರಣ ಪತ್ರವನ್ನು ಅಚ್ಚು ಹಾಕಿರುತ್ತೇವೆ. ಉತ್ತರ ಕ್ರಿಯೆಗೆ ಎಷ್ಟು ರೂಪಾಯಿ ಖರ್ಚಾಗಿರುತ್ತದೆ ಎಂದು ನಾನು ನನ್ನ ಮಕ್ಕಳ ಬಳಿ ಕೇಳಿರುವುದಿಲ್ಲ, ಆದ್ದರಿಂದ ನನಗೆ ತಿಳಿದಿರುವುದಿಲ್ಲ. ಮಹಾಬಲ ಶೆಟ್ಟಿಯವರ ಉತ್ತರ ಕ್ರಿಯೆಗೆ ಸುಮಾರು ರೂ. 51,000/- ಖರ್ಚಾಗಿರುತ್ತದೆ, ಅದನ್ನು ಸಂಪೂರ್ಣವಾಗಿ ಧನಲಕ್ಷ್ಮಿಯವರೇ ಬರಸಿಕೊಂಡಿರುತ್ತಾರೆ ಮತ್ತು ಅವರ ಬಳಿ ಅದಕ್ಕೆ ಸಂಬಂಧಿಸಿದ ರಶೀದಿ ಇರುತ್ತದೆಯೋ ಎಂದರೆ ನನಗೆ ಗೊತ್ತಿಲ್ಲ. ಮಹಾಬಲ ಶೆಟ್ಟಿಯವರ ಉತ್ತರ ಕ್ರಿಯೆಯ ಆಮಂತ್ರಣ ಪತ್ರವನ್ನು ಅಚ್ಚು ಮಾಡಲು ರೂ.1,100/- ಧನಲಕ್ಷ್ಮಿಯವರೇ ಪಾವತಿಸಿ ಅದರ ರಶೀದಿ ಅವರ ಬಳಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಮತ್ತು ಧನಲಕ್ಷ್ಮೀಯವರ ಮನೆ ಹತ್ತಿರದಲ್ಲಿಯೇ ಇದ್ದು, ಮಹಾಬಲ ಶೆಟ್ಟಿಯವರು ಜಾನಕಿಯವರೊಂದಿಗೆ ಸುಮಾರು 57 ವರ್ಷಗಳ ಕಾಲ ಅದೇ ಮನೆಯಲ್ಲಿ ವಾಸ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನೀವು ವಾಸಮಾಡಿಕೊಂಡಿರುವ ಮನೆ ಮತ್ತು ಧನಲಕ್ಷ್ಮೀಯವರ ವಾಸ ಮಾಡಿಕೊಂಡಿರುವ ಮನೆ ಕಣ್ಣಿಗೆ ಕಾಣುವಷ್ಟೇ ದೂರದಲ್ಲಿ ಇರುತ್ತದೆ ಮತ್ತು ಸದರಿ ಮನೆಯು ಮಹಾಬಲ ಶೆಟ್ಟಿಯವರ ಹೆಸರಿನಲ್ಲಿ

ಇರುವಂತಹ ಮನೆಗಳಾಗಿರುತ್ತವೆ ಎಂದರೆ ಸರಿಯಲ್ಲ. ಧನಲಕ್ಷ್ಮೀಯವರು ತೋಡಾರ ನಲ್ಲಿ ಈ ವರ್ಷ ಹೊಸ ಮನೆಯನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅವರ ಮನೆ ತೋಡಾರ ನಲ್ಲಿಯೇ ಇರುತ್ತದೆ ಎಂದು ನುಡಿಯುತ್ತಾರೆ. ಮಹಾಬಲ ಶೆಟ್ಟಿಯವರು ನೀವು ಈಗ ವಾಸ ಮಾಡಿಕೊಂಡಿರುವ ಮನೆಯು ಪುರುಷೊತ್ತಮ ಹೆಸರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮನೆಯ ಹತ್ತಿರದಲ್ಲಿ ಧನಲಕ್ಷ್ಮೀಯವರು ಬೇರೊಂದು ಮನೆಯನ್ನು ಬಾಡಿಗೆಗೆ ಪಡೆದು ಸದರಿ ಮನೆಯಲ್ಲಿ ಧನಲಕ್ಷ್ಮೀಯವರು ಅವರ ಗಂಡ ಮತ್ತು ಅವರ ತಾಯಿ ಜಾನಕಿ ಮತ್ತು ಅವರ ತಂದೆ ಮಹಾಬಲ ಶೆಟ್ಟಿ ಯವರು ವಾಸ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಬಾಡಿಗೆ ಮನೆಯಲ್ಲಿ ಮಹಾಬಲ ಶೆಟ್ಟಿಯವರು ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಮಹಾಬಲ ಶೆಟ್ಟಿಯವರು ಅವರ ಜೀವಿತಾವಧಿಯಲ್ಲಿ ಅವರು ಇದ್ದಂತಹ ಸ್ಥಳವನ್ನು ಧನಲಕ್ಷ್ಮೀ ಯವರ ಹೆಸರಿನಲ್ಲಿ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಹಾಬಲ ಶೆಟ್ಟಿಯವರ ಹೆಸರಿನಲ್ಲಿ ಇದ್ದಂತಹ ಹಣವು ಈಗ ಯಾರ ಹೆಸರಿನಲ್ಲಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ಎಂ.ಸಿ.ಸಿ. ಬ್ಯಾಂಕ್ ರವರು ಸದರಿ ಹಣವು ಧನಲಕ್ಷ್ಮೀ ಯವರ ಹೆಸರಿನಲ್ಲಿ ವಿಲ್ ನಾಮೆ ಬರೆದಿರುತ್ತಾರೆ ಎಂದು ನಿಮ್ಮ ಬಳಿ ಹೇಳಿರುತ್ತಾರೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಮಹಾಬಲ ಶೆಟ್ಟಿಯಿವರ ಕೊನೆಯ ದಿನಗಳಲ್ಲಿ ಅವರನ್ನು ಧನಲಕ್ಷ್ಮೀ ಯವರೇ ನೋಡಿಕೊಂಡಿದ್ದರಿಂದ ಅವರ ಹೆಸರಿನಲ್ಲಿದ್ದ ಹಣವನ್ನೆಲ್ಲ ವಿಲ್ ನಾಮೆಯ ಮುಖಾಂತರ ಧನಲಕ್ಷ್ಮೀ ಯವರ ಹೆಸರಿನಲ್ಲಿ ಬರೆದಿಟ್ಟಿರುತ್ತಾರೆ ಎಂದರೆ ಸರಿಯಲ್ಲ.

9. ಜಾನಕಿಯವರ ಪರಿಚಯ ನನಗೆ ಇರುವುದಿಲ್ಲ. ಜಾನಕಿಯವರು ಮಹಾಬಲ ಶೆಟ್ಟಿ ಯವರ ಪತ್ನಿಯಾಗಿರುತ್ತಾರೆ ಎಂದರೆ ಸರಿಯಲ್ಲ, ನಾನು ಮಾತ್ರ ಅವರ ಪತ್ನಿ ಆಗಿರುತ್ತೇನೆ. ನಿಮಗೆ ಮತ್ತು ಮಹಾಬಲ ಶೆಟ್ಟಿಯವರ ನಡುವೆ ಮನಸ್ತಾಪ ಇದ್ದುದರಿಂದ ಮತ್ತು ನೀವಿಬ್ಬರೂ ಬೇರೆಬೆರೆ ವಾಸ ಮಾಡಿಕೊಂಡಿದ್ದರಿಂದ ಮಹಾಬಲ ಶೆಟ್ಟಿಯವರು ಜಾನಕಿ ಮತ್ತುಅವರ ಮಕ್ಕಳೊಂದಿಗೆ ಬೇರೆನೇ ವಾಸ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಒಂದನೇ ಪ್ರತಿವಾದಿಯವರು ಮಹಾಬಲ ಶೆಟ್ಟಿಯವರ ಮರಣ ದೃಢಿಕರಣ ಪತ್ರವನ್ನು ಸರಿಯಾಗಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮರಣ ದೃಢಿಕರಣ ಪತ್ರ ಕಾನೂನು ಬದ್ದ ವಾಗಿರುವುದಿಲ್ಲ ಎಂದು ಮೇಲ್ಮನವಿಯನ್ನು ಸಲ್ಲಿಸಿರುತ್ತಿರಾ ಎಂದರೆ ನನಗೆ ಗೊತ್ತಿಲ್ಲ. ನಾನು 1934 ನೇ ಸಾಲಿನಲ್ಲಿ ಹುಟ್ಟಿರುತ್ತೇನೆ. ಮಹಾಬಲ ಶೆಟ್ಟಿಯವರಿಗೆ ಅನಾರೋಗ್ಯದ ಸಮಸ್ಯೆ ಬಂದಾಗಲೆಲ್ಲ ಅವರನ್ನುಧನಲಕ್ಷ್ಮೀ ಯವರೇ ಆಸ್ಪತ್ರೆಗೆ ಕೆರೆದುಕೊಂಡು ಹೋಗುತ್ತಿದ್ದರು ಮತ್ತು

ಚಿಕಿತ್ಸೆ ಕೊಡಿಸುತ್ತಿದ್ದರು ಎಂದರೆ ಆಸ್ಪತ್ರೆಗೆ ಹೋಗುತ್ತಿದ್ದರು, ಒಳ ರೋಗಿಯಾಗಿ ದಾಖಲಾಗುತ್ತಿರಲಿಲ್ಲ. ಮಹಾಬಲ ಶಟ್ಟಿಯವರ ಪತ್ನಿ , ಅವರ ಮಕ್ಕಳು , ಧನಲಕ್ಷ್ಮಿ ಮತ್ತು ಪುರಷೊತ್ತಮ ಶೆಟ್ಟಿ ಆಗಿರುತ್ತಾರೆ , ಅದನ್ನು ತಿಳಿದೇ ಒಂದನೇ ಪ್ರತಿವಾದಿಯವರು ಕಾನೂನು ಬದ್ದವಾಗಿ ಮರಣ ಪ್ರಮಾಣ ಪತ್ರವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಮಹಾಬಲ ಶೆಟ್ಟಿಯವರು ಬದುಕಿದ್ದಾಗ ನೀವು ಅವರನ್ನು ನೋಡಿಕೊಂಡಿರುವುದಿಲ್ಲ, ಆದರೆ ಅವರ ಮರಣಾನಂತರ ಅವರ ಬಳಿ ಇದ್ದಂತಹ ಹಣ ಮತ್ತು ಸ್ಥಳ ನಿಮಗೆ ಸಿಗಬೇಕು ಎಂದು ಹೇಳಿ ನೀವು ಅವರ ಮರಣ ದೃಢಿಕರಣ ಪತ್ರದಲ್ಲಿ ತಿದ್ದುಪಡಿ ಕೇಳಿರುತ್ತೀರಿ ಎಂದರೆ ಸರಿಯಲ್ಲ. ಮಹಾಬಲ ಶೆಟ್ಟಿಯವರು ಅವರ ಮರಣ ಹೊಂದುವ ಒಂದು ತಿಂಗಳ ಪೂರ್ವದಲ್ಲಿ ಮಾುಡಬಿದಿರೆಯ ಆಳ್ವಾಸ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿ ಅವರ ಖರ್ಚು ವೆಚ್ಚಗಳನ್ನೆಲ್ಲ ಧನಲಕ್ಷ್ಮಿಯವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೇಳಿ ಕೇಳಿ ಸರಿ ಇದೆ
ಸಹಿ/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾ ದಂ.
ಮೂಡಬಿದಿರೆ